**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\3008\2017\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:02/04/2019

ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಸಾರ್ವಜನಿಕ ಶಿಕ್ಷಣ ಇಲಾಖೆಯ 1) ಕ್ಷೇತ್ರ ಶಿಕ್ಷಣಾಧಿಕಾಯಾದ ಶ್ರೀ.ರಘುನಾಥ ರೆಡ್ಡಿ, 2)ಉಪ ನಿರ್ದೇಶಕರಾಗಿದ್ದ ಶ್ರೀ.ಸ್ವಾಮಿ [ಪ್ರಸ್ತುತ ನಿವೃತ್ತ] ಮತ್ತು 3) ಕ್ಷೇತ್ರ ಶಿಕ್ಷಣಾಧಿಕಾಯಾಗಿದ್ದ ಶ್ರೀ.ಬಿ.ಜಗದೀಶ್ [ಪ್ರಸ್ತುತ ಉಪನ್ಯಾಸಕರು, ಸರ್ಕಾರಿ ಶಿಕ್ಷಕ, ಶಿಕ್ಷಣ ಮಹಾವಿದ್ಯಾಲಯ, ಮೈಸೂರು] ರವರ ಕರ್ತವ್ಯ ಲೋಪದ ಬಗ್ಗೆ.

**********

ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ರವರ ಮೂಲಕ ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ (ಇನ್ನು ಮುಂದೆ, 'ತನಿಖಾಧಿಕಾರಿಗಳು–1' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ ಹೆಸರಿಸಿದ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಸಾರ್ವಜನಿಕ ಶಿಕ್ಷಣ ಇಲಾಖೆಯ 1)ಕ್ಷೇತ್ರ ಶಿಕ್ಷಣಾಧಿಕಾಯಾದ ಶ್ರೀ.ರಘುನಾಥ ರೆಡ್ಡಿ, 2) ಉಪ ನಿರ್ದೇಶಕರಾಗಿದ್ದ ಶ್ರೀ.ಸ್ವಾಮಿ [ಪ್ರಸ್ತುತ ನಿವೃತ್ತ], 3) ತಾಲ್ಲೂಕ್ ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ.ಚಂದ್ರಪ್ಪ, 4) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರು ಮತ್ತು 5) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಇನ್ನು ಮುಂದೆ ಕ್ರಮವಾಗಿ, '1 ರಿಂದ 5ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ಕರ್ತವ್ಯ ಲೋಪದ ಆಪಾದನೆಯ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 7(2)ರಡಿ ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡಿದೆ.

2. ತನಿಖಾ ವರದಿಯ ಸಾರಾಂಶ:– ಕೋಲಾರ ತಾಲ್ಲೂಕು ಹೊದಲವಾಡಿ ಮತ್ತು ಬಾರಾಂಡಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿಗೆ ದಿ:07/10/2017ರಂದು ತನಿಖಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದು, ಸದರಿ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ಛಾವಣಿ, ಗೋಡೆಗಳಲ್ಲಿ ಬಿರುಕುಗೊಂಡಿದ್ದು ಅಲ್ಲಿ

ತರಗತಿಗಳು ನಡೆಯುತ್ತಿರುವುದು ಕಂಡು ಬಂದಿದೆ. ಮಕ್ಕಳ ಮೇಲೆ ಶಾಲಾ ಕಟ್ಟಡ ಬಿದ್ದು ಅನಾಹುತವಾಗುವ ಸಂಭವವಿದೆ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ಅನಾನುಕೂಲವಾಗುತ್ತದೆಯೆಂದು ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿದ್ದು, ದಿ:05/10/2017ರ ರಾತ್ರಿ ಹೊದಲವಾಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು ಭಾಗಶ: ಕುಸಿದಿದೆಯೆಂದು ತಿಳಿದು ಬಂದಿದೆ. ಶಾಲಾ ಕಟ್ಟಡದ ಶಿಥಿಲಾವಸ್ಥೆಯ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ಶಾಲಾ ಆಡಳಿತ ಮಂಡಳಿಯು ತಂದಿದ್ದರೂ ಸಹ ಸದರಿಯವರಿಂದ ಯಾವುದೇ ರೀತಿಯ ಸ್ಪಂದನೆ ಬಂದಿಲ್ಲ. ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದಿರುವುದರಿಂದ ಮತ್ತು ಮಕ್ಕಳಿಗೆ ಪ್ರಾಣಾಪಾಯವಿರುವುದರಿಂದ, ದಿನೇ ದಿನೇ ಮಕ್ಕಳ ದಾಖಲಾತಿಯು ಕಡಿಮೆಯಾಗಿದೆ. 2013ರಿಂದ ಇಲ್ಲಿಯವರೆಗೆ ಹೊದಲವಾಡಿ ಗ್ರಾಮದ ಮುಖ್ಯೋಪಾಧ್ಯಾಯರು ಸದರಿ ಶಾಲೆಯ ಶಿಥಿಲಗೊಂಡಿರುವ ಬಗ್ಗೆ ಪತ್ರ ವ್ಯವಹಾರ ಮಾಡಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ. ಆದ್ದರಿಂದ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಹಾಗೂ ಶಿಥಿಲಗೊಂಡಿರುವ ಶಾಲಾ ಕಟ್ಟಡದ ನಿರ್ಮಾಣದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಲು ಹೇಳಿದ್ದಾರೆ.

3. ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ (ಇನ್ನು ಮುಂದೆ, 'ತನಿಖಾಧಿಕಾರಿಗಳು–2' ಎಂದು ಕರೆಯಲ್ಪಡುತ್ತಾರೆ) ರವರಿಂದ ವರದಿಯನ್ನು ಕೇಳಲಾಗಿ, ಸದರಿಯವರು ಸಲ್ಲಿಸಿದ ವರದಿಯಲ್ಲಿ –

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ ಇವರು ಪತ್ರ ಸಂ:ಆ1:743ಪ್ರಾ:ಪ್ರೌ, ಕಟ್ಟಡ ಶಿಥಿಲ ಅನು:29:2017–18, ದಿ:03/01/2018ರಲ್ಲಿ ಈಗಾಗಲೇ ದಿ:18/11/2017ರಂದು ವರದಿ ಮತ್ತು ದಾಖಲಾತಿಗಳನ್ನು ಈ ಸಂಸ್ಥೆಗೆ ಸಲ್ಲಿಸಿರುವುದಾಗಿ ತಿಳಿಸಿದ್ದು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರದ ಉಪ ನಿರ್ದೇಶಕರಿಂದ ವರದಿಯನ್ನು ಪಡೆದು ಸದರಿ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸುವಂತೆ ದಿ:28/04/2018ರ ಪತ್ರದಲ್ಲಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಕೋಲಾರ ರವರಿಗೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ.

4. ತನಿಖಾಧಿಕಾರಿಗಳು–1ರವರು ಸಲ್ಲಿಸಿದ ತನಿಖಾ ವರದಿಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

AD/3008/17



ಸರ್ಕಾರಿ ಆದೇಶ ಸಂ:ಇಡಿ 03 ಡಿಜಿಎಂ 2017ರನ್ವಯ ದಿ:17/07/2017ರಂದು ತಾವು ಕೋಲಾರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗೆ ಹಾಜರಾಗಿದ್ದು, ಪ್ರಥಮ ಆಧ್ಯತೆ ನೀಡಿ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ಶಾಲೆಗಳ ಮೂಲಭೂತ ಸೌಲಭ್ಯ, ಶೈಕ್ಷಣಿಕವಾಗಿ ಶಾಲೆಗಳಿಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ವಹಿಸಿದೆ. ಈ ಬಗ್ಗೆ ಆಗಸ್ಟ್–2017ರ ಮಾಹೆಯಲ್ಲಿಯೇ ಉಪನಿರ್ದೇಶಕರಿಗೆ ಸಿವಿಲ್ ಕಾಮಗಾರಿಗಳ ಅಗತ್ಯತೆಯ ಪ್ರಸ್ತಾವನೆಯನ್ನು ಸಲ್ಲಿಸಿದೆ. ತಾಲ್ಲೂಕಿನ ಎಲ್ಲಾ ಶಾಲೆಗಳ ದುರಸ್ತಿಗೆ ಸಂಬಂಧಿಸಿದಂತೆ, ಶಾಲೆಗಳ ಪಟ್ಟಿಯನ್ನು ಉಪನಿರ್ದೇಶಕರ ಕಛೇರಿಗೆ ಖುದ್ದು ಸಲ್ಲಿಸಿ ಅಗತ್ಯ ಕ್ರಮ ವಹಿಸಿ ಕೂಡಲೇ ದುರಸ್ತಿಗೆ ಕ್ರಮ ವಹಿಸಲು ಕೋರಲಾಗಿರುವುದರಿಂದ ತಮ್ಮಿಂದ ಯಾವುದೇ ಕರ್ತವ್ಯ ಲೋಪ ಆಗಿಲ್ಲವೆಂದು ಹೇಳಿದ್ದಾರೆ.

5. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಪ್ರಸ್ತಾಪಿತ ಶಾಲಾ ಕಟ್ಟಡಗಳು ಶಿಥಿಲಗೊಂಡಿರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯ ಕುರಿತು ಪರ್ಯಾಯ ವ್ಯವಸ್ಥೆ ಮಾಡಿದೆ. ಸದರಿ ಶಿಥಿಲಗೊಂಡಿರುವ ಶಾಲೆಗಳ ಕಟ್ಟಡಗಳನ್ನು ನೆಲಸಮ ಮಾಡಿ ಹೊಸ ಕೊಠಡಿ ನಿರ್ಮಾಣ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ ರವರ ಜ್ಞಾಪನ ಪತ್ರ ದಿ:25/10/2017ರಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಕೋಲಾರ ಇವರಿಗೆ ಕಾಮಗಾರಿ ವಹಿಸಿದೆ ಎಂದು ಹೇಳಿದ್ದಾರೆ.

6. ಮೂರು (3) ಮತ್ತು 4ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

7. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಹಾನಿಗೊಳಗಾಗಿರುವ ಸರ್ಕಾರಿ ಶಾಲಾ ಕಟ್ಟಡಗಳನ್ನು ದುರಸ್ತಿಗೊಳಿಸಲು ಶಿಕ್ಷಣ ಇಲಾಖೆಯವರು ಪ್ರಸ್ತಾವನೆ ಹಾಗೂ ಅನುದಾನ ಬಿಡುಗಡೆಗೊಳಿಸ ಬೇಕಾಗಿದೆ. ತದನಂತರ, ಅಂದಾಜು ಪಟ್ಟಿಯನ್ನು ತಯಾರಿಸಿ ಮೇಲಾಧಿಕಾರಿಯವರಿಂದ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸ ಬೇಕಾಗಿರುವುದು ತಮ್ಮ ಇಲಾಖೆಯ ಕರ್ತವ್ಯವಾಗಿದೆ. ಪಂಚಾಯತ್ ಇಂಜಿನಿಯರಿಂಗ್ ಉಪ–ವಿಭಾಗ ವ್ಯಾಪ್ತಿಗೆ ಯಾವುದೇ ಕಾಮಗಾರಿ ಕೈಗೊಳ್ಳಲು ನೇರವಾದ ಅನುದಾನ ಲಭ್ಯತೆ ಇಲ್ಲ. ಹೊದಲವಾಡಿ ಮತ್ತು ಬಾರಂಡಹಳ್ಳಿ ಶಾಲಾ ಕಟ್ಟಡಗಳ ದುರಸ್ತಿ ಕಾರ್ಯ ಕೈಗೊಳ್ಳಲು ಶಿಕ್ಷಣ ಇಲಾಖೆಯಿಂದ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ ಎಂದು ಹೇಳಿದ್ದಾರೆ.

8. ಶಾಲಾ ಕಟ್ಟಡವು ಶಿಥಿಲಗೊಂಡ ನಂತರದ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಕೋಲಾರ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿದ್ದ ಶ್ರೀ.ಬಿ.ಜಗದೀಶ್ (ಪ್ರಸ್ತುತ ಉಪನ್ಯಾಸಕರು, ಸರ್ಕಾರಿ ಶಿಕ್ಷಕ, ಶಿಕ್ಷಣ ಮಹಾವಿದ್ಯಾಲಯ, ಮೈಸೂರು) ರವರನ್ನು 6ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ ಸದರಿಯವರಿಂದ ತನಿಖಾ ವರದಿಗೆ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ–

> ತಾವು ದಿನಾಂಕ:21/10/13 ರಿಂದ 25/07/17ರವರೆಗೆ ಕೋಲಾರ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ದೂರಿಗೆ ಸಂಬಂಧಿಸಿದ ಎರಡು ಶಾಲೆಗಳು ಬರುವ ವಿಚಾರ ನಿಜವಾಗಿದೆ. 2016–17ನೇ ಸಾಲಿನಲ್ಲಿ ಅಕ್ಟೋಬರ್ ತಿಂಗಳಿನಲ್ಲಿ ದಿನಾಂಕ:05/10/17ರಂದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹೊದಲವಾಡಿ ಕಟ್ಟಡದ ದಕ್ಷಿಣ ಭಾಗದಲ್ಲಿರುವ ಒಂದು ಕೊಠಡಿಯ ಮೇಲ್ಛಾವಣಿ ಮತ್ತು ಗೋಡೆಗಳು ಬಿದ್ದು ಹೋಗುವ ಸಮಯದಲ್ಲಿ ತಾವು ಕೋಲಾರ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಸದರಿ ಶಾಲಾ ಕಟ್ಟಡವು 25 ವರ್ಷಗಳಷ್ಟು ಹಳೆಯದಾಗಿದ್ದು, ಅದರಲ್ಲಿರುವ ಒಂದು ಕೊಠಡಿ ಶಿಥಿಲಗೊಂಡಿದ್ದು, ಅದನ್ನು ಕೆಡವಲು ಕ್ರಮ ಕೈಗೊಳ್ಳಲು ಶಾಲಾ ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಮಾಡಿದ್ದರು. ಅದರಂತೆ, ಶಾಲಾ ಮುಖ್ಯಸ್ಥರಿಗೆ ಸೂಚನೆ ನೀಡಿ, ಶಾಲಾ ಎಸ್‌ಡಿಎಂಸಿ ವತಿಯಿಂದ ಗ್ರಾಮ ಪಂಚಾಯತ್‌ಗೆ ಮನವಿ ಮಾಡಲು ತಿಳಿಸಿರುವುದಲ್ಲದೇ, ಲೋಕೋಪಯೋಗಿ ಇಲಾಖೆಯ ಅಭಿಯಂತರರಿಗೂ ಪತ್ರ ಬರೆದು, ಶಿಥಿಲಗೊಂಡಿರುವ ಕೊಠಡಿಯನ್ನು ತೆರವುಗೊಳಿಸಲು ತಾಂತ್ರಿಕ ಸಲಹೆ ನೀಡುವಂತೆ ಸೂಚಿಸಿದೆ. ಅದರಂತೆ, ಶಾಲಾ ಮುಖ್ಯೋಪಾಧ್ಯಾಯರು ಕ್ರಮ ವಹಿಸಿದ್ದಾರೆ. ಆದರೂ, ಈ ಸಂಬಂಧ ಯಾವುದೇ ಕ್ರಮ ಆಗಿಲ್ಲವೆಂಬುದನ್ನು ಗಮನಿಸಿ, ತುಂಬಾ ಶಿಥಿಲಾವಸ್ಥೆಯಲ್ಲಿರುವ ಕೊಠಡಿಯನ್ನು ತೆರವುಗೊಳಿಸಲು ತಾಂತ್ರಿಕ ಸಲಹೆ ನೀಡಿ, ಅಗತ್ಯ ಕ್ರಮ ವಹಿಸುವಂತೆ ಕೋರಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ದಿನಾಂಕ:12/07/17ರಂದು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೋಲಾರ ರವರಿಗೆ ಪತ್ರ ಬರೆದಿದ್ದು, ನಂತರದಲ್ಲಿ ತಮಗೆ ವರ್ಗಾವಣೆಯಾದ ಪ್ರಯುಕ್ತ ನಂತರದ ಅನುಪಾಲನೆ ಮಾಡಲು ಸಾಧ್ಯವಾಗಿಲ್ಲ. 2016ನೇ ಸಾಲಿನಲ್ಲಿ ಕೋಲಾರ ತಾಲ್ಲೂಕಿನಾದ್ಯಂತ ಸುರಿದ ಬಾರಿ ಮಳೆ ಪರಿಣಾಮವಾಗಿ ಶಿಥಿಲಗೊಂಡ 222 ಸರ್ಕಾರಿ ಪ್ರಾಥಮಿಕ ಶಾಲೆಗಳ ಪೈಕಿ ಈ ದೂರಿಗೆ ಸಂಬಂಧಿಸಿದ ಎರಡು ಶಾಲೆಗಳು ಸೇರಿದ್ದು, ಸದರಿ ಶಾಲೆಗಳ ದುಸ್ಥಿತಿಯನ್ನು ಶಾಸಕರಿಗೆ ವಿವರಿಸಿ, ಅವರು ಅನುಮೋದನೆ ಮಾಡಿಕೊಟ್ಟ ಶಾಲೆಗಳ ಪಟ್ಟಿಯನ್ನು ಅಗತ್ಯ ಕ್ರಮಕ್ಕಾಗಿ ಉಪ ನಿರ್ದೇಶಕರ ಮೂಲಕ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದೆ. ಶಾಲಾ ಕೊಠಡಿಗಳನ್ನು ನಿರ್ಮಿಸಲು ಅಥವಾ ದುರಸ್ತಿ ಮಾಡಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಯಾವುದೇ ಅನುದಾನ ಲಭ್ಯವಿಲ್ಲ. ಸದರಿ ಎರಡು ಶಾಲೆಗಳ ದುರಸ್ತಿಗೆ ಅಗತ್ಯ ಕ್ರಮ ಕೈಗೊಳ್ಳಲು ಶಾಸಕರ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆಗೆ ಅನುಮೋದನೆ ದೊರೆಯದೇ ಇದ್ದರಿಂದ, ಆ ಶಾಲೆಗಳ ಕೊಠಡಿಗಳ ದುರಸ್ತಿ ಕಾರ್ಯ ಸಾಧ್ಯವಾಗಿಲ್ಲ ಎಂದು ಹೇಳಿದ್ದಾರೆ.

BD/3008/17



9. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ತನಿಖಾ ವರದಿಯನ್ವಯ ತನಿಖಾಧಿಕಾರಿಗಳು-1ರವರು ಕೋಲಾರ ತಾಲ್ಲೂಕ್, ಹೊದಲವಾಡಿ ಮತ್ತು ಬಾರಂಡಹಳ್ಳಿ ಗ್ರಾಮಗಳ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ದಿನಾಂಕ:07/10/17ರಂದು ಪರಿಶೀಲಿಸಿದಾಗ, ಈ ಕೆಳಕಂಡ ಅಂಶಗಳು ಕಂಡು ಬಂದಿವೆ –

**ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹೊದಲವಾಡಿ:-**

ಅ) ಶಾಲಾ ಕಟ್ಟಡದಲ್ಲಿ 4 ಕೋಣೆಗಳಿದ್ದು, ದಕ್ಷಿಣ ದಿಕ್ಕಿನಲ್ಲಿರುವ ಕೋಣೆ ಬಿದ್ದು ಹೋಗಿದೆ;

ಆ) ಸದರಿ ಕಟ್ಟಡದ ಪಕ್ಕದಲ್ಲಿರುವ ಕೋಣೆಯು ಬಿರುಕುಗೊಂಡು ಶಿಥಿಲಾವಸ್ಥೆಯಲ್ಲಿರುವುದು ಕಂಡು ಬಂದಿದೆ;

ಇ) ಶಿಥಿಲಗೊಂಡ ಗೋಡೆ \ ಕಟ್ಟಡದ ಭಾಗ ವಿದ್ಯಾರ್ಥಿಗಳ ಮೇಲೆ ಬಿದ್ದು ಅನಾಹುತ ಆಗುವ ಸಂಭವ ಇರುವುದು ಕಂಡು ಬಂದಿದೆ.

**ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಬಾರಾಂಡಹಳ್ಳಿ:-**

ಅ) ಶಾಲಾ ಕಟ್ಟಡದಲ್ಲಿ 2 ಕೋಣೆಗಳು ಹಾಗೂ ಬಿಸಿಯೂಟ ತಯಾರಿಸುವ ಅಡುಗೆ ಮನೆ ಇದೆ;

ಆ) ಶಾಲಾ ಕಟ್ಟಡದ ಮುಂಭಾಗದ ಛಾವಣಿಗೆ ಅಳವಡಿಸಿರುವ ಸಿಮೆಂಟ್ ಉದುರುತ್ತಿರುವುದು \ ಬೀಳುತ್ತಿರುವುದು ಕಂಡು ಬಂದಿದೆ.

2) ಕರ್ನಾಟಕ ಶಿಕ್ಷಣ ಕಾಯಿದೆ, 1983 ಕಲಂ 57(1) ಈ ಕೆಳಗಿನಂತಿದೆ –

"57. **Inspection or inquiry etc.**- (1) The State Government or **the competent authority** may **suo motu or otherwise cause an inspection of or inquiry in respect of any educational institution, its accounts, its buildings**, laboratories, libraries, workshops and equipments and also of the examinations, teaching and other work conducted or done by the institution to be made by such person or persons as it may direct or to cause an inquiry to be held in respect of examination, working and financial condition of such institution or of any other matter connected with the institution in accordance with such rules as may be prescribed."

3) ಸದರಿ ಶಾಲೆಗಳಲ್ಲಿ ಕ್ರಮವಾಗಿ 12 ಮತ್ತು 24 ವಿದ್ಯಾರ್ಥಿ-ವಿದ್ಯಾರ್ಥಿನಿಯರು 2017-18ನೇ ಸಾಲಿನಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆಂದು ತನಿಖಾಧಿಕಾರಿಗಳು-1ರವರ ವರದಿಯಲ್ಲಿ ಕಂಡು ಬಂದಿದೆ. ಸದರಿ ಶಾಲಾ ಕಟ್ಟಡಗಳ ಪ್ರಸ್ತುತ ಸ್ಥಿತಿಯ ಬಗ್ಗೆ ಶಾಲೆಗಳ ಮುಖ್ಯೋಪಾಧ್ಯಾಯರು ದಿನಾಂಕ:13/11/17 ಮತ್ತು 14/11/17ರಂದು ಪತ್ರಗಳನ್ನು ಬರೆದು ಕಟ್ಟಡದ ದುಸ್ಥಿತಿಯ ಬಗ್ಗೆ ಕೋಲಾರ ತಾಲ್ಲೂಕ್ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ 1ನೇ ಎದುರುದಾರರ ಗಮನಕ್ಕೆ ತಂದಿದ್ದಾರೆ;

4) ಹೊದಲವಾಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡವು ಬಹಳ ವರ್ಷಗಳ ಹಿಂದೆ ನಿರ್ಮಾಣಗೊಂಡಿದ್ದು ಎಷ್ಟು ರಿಪೇರಿ ಮಾಡಿಸಿದರೂ ಸಹ ಮತ್ತೆ ಅದೇ ರೀತಿ ಬಿರುಕು ಬಿಡುತ್ತಿರುವ ಕಾರಣ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಪಾಯ ಸಂಭವಿಸುವ ಸಾಧ್ಯತೆ ಇರುವುದರಿಂದ ಕೊಠಡಿಗಳನ್ನು ಕೆಡವಿ ಹೊಸ ಕೊಠಡಿಗಳನ್ನು ನಿರ್ಮಾಣ ಮಾಡಿಕೊಡಲು ದಿ:02/02/2013, 20/01/2014, 01/08/2016, 15/06/2017ರಂದು ಕೋಲಾರ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಶಾಲಾ ಮುಖ್ಯೋಪಾಧ್ಯಾಯರು ಪತ್ರಗಳನ್ನು ಬರೆದಿರುವುದಲ್ಲದೆ, ದಿ:15/07/2016ರಂದು ನಡೆದ ಶಾಲಾ ಎಸ್‌ಡಿಎಂಸಿ ಸಭೆಯಲ್ಲಿ ಕಟ್ಟಡ ದುರಸ್ತಿ ಬಗ್ಗೆ ಕ್ರಮ ವಹಿಸಲು ಅಧಿಕಾರಿಗಳ ಅವಗಾಹನೆಗೆ ಸಲ್ಲಿಸಬೇಕೆಂದು ಸರ್ವಾನುಮತದಿಂದ ಅಂಗೀಕಾರವಾಗಿದೆ;

5) ದೂರಿನ 6ನೇ ಎದುರುದಾರರು ದಿನಾಂಕ:21/10/13 ರಿಂದ 25/07/17ರವರೆಗೆ ಮತ್ತು 1ನೇ ಎದುರುದಾರರು ದಿನಾಂಕ:17/07/17 ರಿಂದ ಕೋಲಾರ ತಾಲ್ಲೂಕ್ ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದಾರೆ \ ನಿರ್ವಹಿಸುತ್ತಿದ್ದಾರೆ. ಸದರಿಯವರು ತಮ್ಮ ಕರ್ತವ್ಯದ ಅವಧಿಯಲ್ಲಿ ಸದರಿ ಶಾಲೆಗಳಿಗೆ ಭೇಟಿ ನೀಡಿ, ಕಟ್ಟಡವನ್ನು ಪರಿಶೀಲಿಸಿ, ಕಟ್ಟಡದ ವಸ್ತು ಸ್ಥಿತಿಯ ಬಗ್ಗೆ ಹಾಗೂ ಕಟ್ಟಡದ ದುರಸ್ತಿ ಬಗ್ಗೆ ತಮ್ಮ ಮೇಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸದೇ ಇರುವುದು ಕಂಡು ಬಂದಿದೆ;

6) ಸದರಿ ಅವಧಿಯಲ್ಲಿ ದೂರಿನ 2ನೇ ಎದುರುದಾರರು ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ ದಲ್ಲಿ ಉಪನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಶಾಲಾ ಕಟ್ಟಡಗಳು ಶಿಥಿಲಗೊಂಡಿರುವ ಮೇರೆಗೆ ವಿದ್ಯಾರ್ಥಿಗಳ ಶಿಕ್ಷಣ \ ಸುರಕ್ಷತೆ ಕುರಿತು ಪರ್ಯಾಯ ವ್ಯವಸ್ಥೆ ಮಾಡದೇ ಇರುವುದು ಕಂಡು ಬಂದಿದ್ದು, ದೂರಿನಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕೋಲಾರ ರವರ ವರದಿಯನ್ನು ಕೇಳಿದ ನಂತರ ಸದರಿಯವರು ಕಾರ್ಯ ಪ್ರವೃತ್ತರಾಗಿರುವುದು ಕಂಡು ಬಂದಿದೆ. ಕಾರಣ, ದೂರಿನ, 1, 2 ಮತ್ತು 6ನೇ ಎದುರುದಾರರುಗಳು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

10. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ವರದಿಗಳು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1, 2 ಮತ್ತು 6ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

11. 3 ರಿಂದ 5ನೇ ಎದುರುದಾರರುಗಳ ಯಾವುದೇ ಕರ್ತವ್ಯ ಲೋಪ ಕಂಡು ಬರದಿರುವುದರಿಂದ, 3 ರಿಂದ 5ನೇ ಎಧುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

90/3008/17



12. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1, 2 ಮತ್ತು 6ನೇ ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಅದಲ್ಲದೆ 1, 2 ಮತ್ತು 6ನೇ ಎದುರದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 2ನೇ ಎದುರುದಾರರು ದಿನಾಂಕ:30/06/2018ರಂದು ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ** 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ 1, 2 ಮತ್ತು 6ನೇ ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 2ನೇ ಎದುರುದಾರರು ದಿನಾಂಕ:30/06/2018ರಂದು ನಿವೃತ್ತಿ ಹೊಂದಿದ್ದಾರೆ.

N. Anand 2/4

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

1.04.04.